
ಬೆಂಜಾಮಿನ ಬ್ಯಾನೆಕರ
ಆದ್ಯ ಸಂಶೋಧಕ



ಜಿಂಜರ ವ್ಯಾಡ್ಸವರ್ಥ

ಚಿತ್ರಃ ಕ್ರೇಗ್ ಓರ್ಬಾಕ

ಬೆಂಜಾಮಿನ ಬ್ಯಾನೆಕರ ಆದ್ಯ ಸಂಶೋಧಕ

ಜಿಂಜರ ವ್ಯಾಡ್ಸವರ್ಥ
ಚಿತ್ರ: ಕ್ರೇಗ್ ಓರ್ಬಾಕ

ಕನ್ನದಕ್ಕೆ: ಪ್ರಭಾಕರ ನಾನಾವಟಿ




ಮೇರಿಲ್ಯಾಂಡ 1737

ಬೆಂಜಾಮಿನ ಬ್ಯಾನೇಕರ (ಉಚ್ಚಾರಃ ಬ್ಯಾನೇಕ) ತನ್ನ ಸ್ವಂತದ ಹೊಗೆಸೊಪ್ಪಿನ ಹೊಲದಲ್ಲಿ ಕೆಲಸ ಮಾಡುತ್ತಿದ್ದನು. ಆರು ವರುಷದ ಹುಡುಗನಿಗೆ ಇಂತಹ ಕೆಲಸ ಮೈದಣಿಸುವಂತಹದಿತ್ತು. ಉರಿ ಬಿಸಿಲಿನಲ್ಲಿ ಸಲಿಕೆಯಿಂದ ಹುಲ್ಲನ್ನು ತೆಗೆಯುವಾಗ ಬಿಸಿಲಿನ ಝಳದಿಂದ ಬೆನ್ನು ಉರಿಯುತ್ತಿತ್ತು. ಹೊಗೆಸೊಪ್ಪಿನ ಸಸಿಯ ಎಲೆಯ ಮೇಲಿನ ಹುಳಗಳನ್ನು ಒಂದೊಂದಾಗಿ ಕಿತ್ತಿ ಎಸೆಯುವಾಗ ಬೆಂಜಾಮಿನ ಅವುಗಳ ಎಣಿಕೆ ಮಾಡುತ್ತಿದ್ದನು.




ಅವನು ಒಂದು ಸಾಲಿನಲ್ಲಿ ಎಷ್ಟು ಸಸಿಗಳಿವೆ, ಹೊಲದಲ್ಲಿ ಎಷ್ಟು ಸಾಲುಗಳಿವೆ ಎಂಬುದನ್ನು ಕೂಡ ಎಣಿಸುತ್ತಿದ್ದನು. ಇಷ್ಟೇ ಅಲ್ಲದೆ ತಾನು ಇರುತ್ತಿರುವ ಕಟ್ಟಿಗೆಯ ಕ್ಯಾಬಿನ್ನಿನಲ್ಲಿಯ ಕಟ್ಟಿಗೆಯ ತುಂಡುಗಳನ್ನು ಕೂಡ ಎಣಿಸುತ್ತಿದ್ದನು. ಅವನ ತಂದೆ-ತಾಯಿ ಮತ್ತು ತಂಗೆಂದಿರ ಜತೆ ಕೆಲಸ ಮಾಡುತ್ತಿದ್ದಾಗ ಎಣಿಸುವದು ಒಂದು ಮೋಜು ಎಂದು ಅವನಿಗೆ ಅನ್ನಿಸುತ್ತಿತ್ತು.

ರಾತ್ರಿಯ ಊಟದ ವೇಳೆಯಲ್ಲಿ ಕುಟುಂಬದ ಆಗುಹೋಗುಗಳ ಬಗ್ಗೆ ಆತನು ಲಕ್ಷವಿಟ್ಟು ಆಲಿಸುತ್ತಿದ್ದನು. ಅವನ ಅಜ್ಜಿ ಗೌರ ವರ್ಣದವಳು. ಆಕೆ ಎಷ್ಟೋ ವರುಷಗಳವರೆಗೆ ಕೂಲಿಯಾಳಾಗಿ ಕೆಲಸ ಮಾಡುತ್ತಿದ್ದಳು. ಅವಳಿಗೆ ಪೂರ್ಣ ಸಂಬಳ ಕೂಡ ದೊರೆಯುತ್ತಿರಲಿಲ್ಲ. ಬೆಂಜಾಮಿನನ ಅಜ್ಜ ಕಪ್ಪು ವರ್ಣದವರು. ಆಫ್ರಿಕೆಯಲ್ಲಿದ್ದರೆ ಅವರು ರಾಜಕುಮಾರನಂತೆ ಮೆರೆಯಬಹುದಿತ್ತು. ಆದರೆ ಇಲ್ಲಿ ಅವರು ಗುಲಾಮರಾಗಿದ್ದರು. ಬೆಂಜಾಮಿನನ ತಂದೆ ಕೂಡ ಗುಲಾಮರಾಗಿದ್ದರು. ಆದರೆ ಈಗಿನ ಕುಟುಂಬದಲ್ಲಿ ಯಾರೂ ಗುಲಾಮರಾಗಿರಲಿಲ್ಲ. ಅವರೆಲ್ಲರು ಗುಲಾಮಗಿರಿಯಿಂದ ಮುಕ್ತ ರಾಗಿದ್ದರು. ಅವರದೇ ಆದ ಸ್ವಂತದ ಹೊಲಮನೆಗಳಿದ್ದವು. ಹಾಗೆ ನೋಡಿದರೆ ಬೆಂಜಾಮಿನ ಮತ್ತು ಅವನ ಕುಟುಂಬ ಸುದೈವಿಯೇ ಸರಿ. ಆಗಿನ ಕಾಲದ ಅಮೇರಿಕೆಯಲ್ಲಿಯ ಕಪ್ಪು ವರ್ಣದ ಜನರೆಲ್ಲರು ಗುಲಾಮರ ಜೀವನವನ್ನೇ ಜೀವಿಸುತ್ತಿದ್ದರು.






ರಾತ್ರಿಯ ಊಟದ ನಂತರ ಬೆಂಜಾಮಿನ ತನ್ನ ಅಜ್ಜಿ ಮಾಲಿಯ ಹತ್ತಿರ ಕುಳಿತಿರುತ್ತಿದ್ದನು. ಕ್ಯಾಬಿನ್ನದ ಒಂದು ಮೂಲೆಗೆ ಅಗ್ಗಿಷ್ಟಿಕೆಯು ಉರಿಯುತ್ತಿದ್ದರಿಂದ ಕೋಣೆಯು ಬೆಚ್ಚಗಿರುತ್ತಿತ್ತು. ಕೋಣೆಯಲ್ಲಿ ಮೇಣಬತ್ತಿ ಪ್ರಕಾಶ. ಅಜ್ಜಿಯ ಹತ್ತಿರ ಒಂದು ಚಿಕ್ಕ ಬಾಯಬಲ್ ಪ್ರತಿ ಇತ್ತು. ಮನೆಯಲ್ಲಿ ಅದೇ ಒಂದು ಪುಸ್ತಕ. ಅಜ್ಜಿಯು ಬೆಂಜಾಮಿನನಿಗೆ ಪುಸ್ತಕ ಹೇಗೆ ಓದಬೇಕು ಎಂಬುದನ್ನು ಕಲಿಸುತ್ತಿದ್ದಳು. ಬೆಂಜಾಮಿನ ಶೀಘ್ರದಲ್ಲಿ ಓದುವದನ್ನು ಕಲಿತನು. ಮನೆಯಲ್ಲಿಯ ಎಲ್ಲರಿಗೂ ಇದು ಒಂದು ಹೆಮ್ಮೆಯ ಸಂಗತಿ. ಅವನಿಗೆ ಓದಲು, ಬರೆಯಲು ಬರತೊಡಗಿತು. ಗಣಿತ ಬಿಡಿಸಲು ಬರುತ್ತಿತ್ತು.ಇದೆಲ್ಲ ಕಲಿತ ಮೇಲೆ ಅಜ್ಜಿಯು . ಅವನನ್ನು ಶಾಲೆಗೆ ಕಳುಹಿಸತೊಡಗಿದಳು.






ಇಷ್ಟೊಂದು ಪುಸ್ತಕಗಳನ್ನು ಅವನು ಎಂದಿಗೂ ನೋಡಿರಲಿಲ್ಲ! ಮಾಲಿ ಅಜ್ಜಿಯಂತೆ ಶಾಲೆಯಲ್ಲಿಯ ಎಲ್ಲ ಮಕ್ಕಳು ಗೌರ ವರ್ಣದವರು. ಎಲ್ಲರು ಕಟ್ಟಿಗೆಯ ಬೆಂಚ ಮೇಲೆ ಕೂಡುತ್ತಿದ್ದರು. ಶಿಕ್ಷಕರು ಕಲಿಸುವದನ್ನು ಕಲಿಯುತ್ತಿದ್ದರು. ಗಣಿತದಲ್ಲಿಯ ಸಮಸ್ಯೆಗಳನ್ನು ಬಿಡಿಸುತ್ತಿದ್ದರು. ಉಳಿದ ವೇಳೆಯಲ್ಲಿ ಪುಸ್ತಕ ಓದುತ್ತಿದ್ದರು. ಶಿಕ್ಷಕರು ಬೆಂಜಾಮಿನನಿಗೆ ಪುಸ್ತಕಗಳನ್ನು ಮನೆಗೆ ಒಯ್ಯಲು ಅನುಮತಿ ಕೊಡುತ್ತಿದ್ದರು. ಬೆಂಜಾಮಿನ ಕಲಿಯುವದಕ್ಕಾಗಿ ಪರಿಶ್ರಮ ತೆಗೆದುಕೊಳ್ಳುತ್ತಿದ್ದನು. ಸಾಕಷ್ಟು ಕಲಿಯುತ್ತಿದ್ದನು. ಶಾಲೆ ಬಿಟ್ಟ ಮೇಲೆ ಮನೆಗೆಲಸ ಮಾಡುತ್ತಿದ್ದನು. ನಿದ್ದೆ ಬರದಿದ್ದರೆ ಪುಸ್ತಕ ಓದುತ್ತಿದ್ದನು.





ರಾತ್ರಿಯಲ್ಲಿ ಹಾಸಿಗೆಯ ಮೇಲೆ ಮಲಗಿದಾಗ ಕಿಂಡಿಯಿಂದ ಹೊರಗೆ ನೋಡುತ್ತಿದ್ದನು. ನೀಲಿ-ಕಪ್ಪು ಆಕಾಶದಲ್ಲಿ ಚುಕ್ಕೆಗಳು ಮಿಂಚುತ್ತಿದ್ದವು. ಕೆಲವು ಚುಕ್ಕೆಗಳು ಹೆಚ್ಚು ಹೊಳೆಯುತ್ತಿದ್ದವು. ಇದು ಹೀಗೇಕೆ ಎಂದು ಅವನಿಗೆ ಅಚ್ಚರಿಯಾಗುತ್ತಿತ್ತು. ಕೆಲ ಚುಕ್ಕೆಗಳ ಗುಂಪು ಬೇರೆ ಬೇರೆ ಆಕಾರ ಮತ್ತು ಬೇರೆ ಬೇರೆ ಪ್ರಾಣಿಗಳಂತೆ ಕಾಣುತ್ತಿದ್ದವು. ಕೆಲ ಚುಕ್ಕೆಗಳು ಮುಗಿಲಿನಿಂದ ಭೂಮಿಗೆ ಜಿಗಿದಂತೆ ಕಾಣುತ್ತಿದ್ದವು. ಬೆಂಜಾಮಿನನಿಗೆ ಇದೆಲ್ಲ ಹೀಗೇಕೆ ಆಗುತ್ತದೆ ಎಂಬುದರ ಬಗ್ಗೆ ಪ್ರಶ್ನೆ ಬೀಳುತ್ತಿತ್ತು.




ಕಟ್ಟಿಗೆ ಗಡಿಯಾರದ ರಚನೆ

ನಾಲ್ಕು ವರುಷ ಶಾಲೆ ಕಲಿತ ಮೇಲೆ ಬೆಂಜಾಮಿನನಿಗೆ ಶಾಲೆ ಬಿಡಬೇಕಾಯಿತು. ಅವನು ಸಶಕ್ತ ತರುಣನಾಗಿದ್ದನು.
ಹೊಲಗೆಲಸಕ್ಕಾಗಿ ಅವನ ಕುಟುಂಬಕ್ಕೆ ಅವನು ಬೇಕಾಗಿದ್ದನು.



ಆದರೆ ಶಾಲೆಯು ಅವನ ಕಲಿಯುವ ಹಸಿವನ್ನು ಹೆಚ್ಚಿಸುತ್ತಿತ್ತು. ಈಗಲೂ ಆತನು ಆಕಾಶದ ನಿರೀಕ್ಷಣೆಯಲ್ಲಿ ವೇಳೆ ಕಳೆಯುತ್ತಿದ್ದನು. ಎಷ್ಟೋ ಸಲ ಗಣಿತದ ಸಮಸ್ಯೆಗಳನ್ನು ಬಿಡಿಸುತ್ತಿದ್ದನು. ಪೆನ್ಸಿಲನ್ನು ಉಪಯೋಗಿಸದೆ ಬೆರಳಿನಿಂದಲೇ ಉಸುಕಿನಲ್ಲಿ ಗೆರೆಗಳನ್ನು ಬರೆಯುತ್ತಿದ್ದನು. ಮೇಣಬತ್ತಿಯ ಬೆಳಕಿನಲ್ಲಿ ಪುಸ್ತಕಗಳನ್ನು ಓದುತ್ತಿದ್ದನು.

ಉಳಿದ ಒಕ್ಕಲಿಗರಂತೆ ಬೆಂಜಾಮಿನ ಕೂಡ ಆಕಾಶದಲ್ಲಿಯ ಸೂರ್ಯನನ್ನು ನೋಡಿ ವೇಳೆ ಹೇಳುತ್ತಿದ್ದನು. ಆದರೆ ಸೂರ್ಯ ಗಿಡದ ಹಿಂದೆ ಇಲ್ಲವೆ ಮೋಡಗಳ ಹಿಂದೆ ಅಡಗಿದ್ದಾಗ ಸರಿಯಾದ ವೇಳೆ ಹೇಳುವದು ಶಕ್ಯವಾಗುತ್ತಿರಲಿಲ್ಲ. ಗಡಿಯಾರಗಳು ಆ ಕಾಲದಲ್ಲಿ ಇದ್ದವು. ಆದರೆ 1750 ರ ಸುಮಾರಿಗೆ ಅವು ಕೇವಲ ಸಿರಿವಂತರ ಹತ್ತಿರ ಇರುತ್ತಿದ್ದವು. 20 ವರುಷದ ಬೆಂಜಾಮಿನನಿಗೆ ಸ್ವಂತಕ್ಕಾಗಿ ಒಂದು ಗಡಿಯಾರ ತಯಾರಿಸಬೇಕೆಂದು ಅನ್ನಿಸುತ್ತಿತ್ತು. ಬೆಂಜಾಮಿನನು ತನ್ನ ಗೆಳೆಯನ ಹತ್ತಿರದ ಒಂದು ಪಾಕೆಟ ವಾಚನ್ನು ಎರವಲಾಗಿ ಇಸಿದುಕೊಂಡನು. ಅದರ ಎಲ್ಲ ಬಿಡಿ ಭಾಗಗಳನ್ನು ಬೇರೆ ಬೇರೆ ಮಾಡಿದನು. ಆ ಭಾಗಗಳು ಹೇಗೆ ಕೆಲಸ ಮಾಡುತ್ತಿರಬಹುದು ಎಂಬುದನ್ನು ಅಭ್ಯಸಿಸಿದನು. ಮುಳ್ಳುಗಳು ದುಂಡಗೆ ತಿರುಗುತ್ತ ಸೇಕಂದು, ನಿಮಿಷ ಮತ್ತು ಗಂಟೆಗಳ ಲೆಕ್ಕವನ್ನು ಹೇಗೆ ಮಾಡುತ್ತವೆ ಎಂಬುದನ್ನು ಕಂಡುಕೊಂಡನು. ಈ ಭಾಗಗಳ ಚಿತ್ರವನ್ನು ತೆಗೆದನು. ಮತ್ತು ಪ್ರತಿಯೊಂದು ಭಾಗದಂತೆ ಕಟ್ಟಿಗೆಯನ್ನು ಕೊರೆದು ಭಾಗಗಳನ್ನು ತಯಾರಿಸಿದನು. ಸಂಪೂರ್ಣ ಚಳಿಗಾಲ ಮತ್ತು ಬೇಸಿಗೆಯನ್ನು ಇದೇ ಕೆಲಸದಲ್ಲಿ ಕಳೆದನು.





ಕಟ್ಟಿಗೆಯನ್ನು ಕೊರೆದು ಗಡಿಯಾರದ ಭಾಗಗಳನ್ನು ಮಾಡುವ ಕೆಲಸ ಎರಡು ವರುಷಗಳವರೆಗೆ ನಡೆದಾದ ಮೇಲೆ ಈ ಕಟ್ಟಿಗೆಯ ಗಡಿಯಾರವು ತಯಾರಾಯಿತು. ಈ ಹೊಸ ಗಡಿಯಾರ ಸರಿಯಾದ ವೇಳೆ ತೋರಿಸುತ್ತಿತ್ತು. ಈಗ ಅವನಿಗೆ ಮುಗಿಲನ್ನು ನೋಡಿ ವೇಳೆ ತಿಳಿದುಕೊಳ್ಳುವ ಅವಶ್ಯಕತೆ ಇರಲಿಲ್ಲ. ಎಲ್ಲರಿಗೂ ಈ ಗಡಿಯಾರ ನೋಡಿ ಆಶ್ಚರ್ಯವಾಯಿತು. ಅವರೆಲ್ಲರಿಗೂ ಗಡಿಯಾರ ತಯಾರಿಸಿದವರನ್ನು ನೋಡಬೇಕೆಂದು ಅನ್ನಿಸುತ್ತಿತ್ತು.




ಬೆಂಜಾಮಿನ 27 ವರುಷದವನಿದ್ದಾಗ ಒಂಟಿಗತನದ ಭಾವನೆ ಬರತೊಡಗಿತು. ಒಬ್ಬನೆ ಮಾಡುತ್ತಿದ್ದ ಹೊಲಗೆಲಸದ ಬೇಸರಿಕೆ ಬರತೊಡಗಿತು.. ಅವನ ತಂದೆ ತೀರಿಕೊಂಡಿದ್ದರು. ತಂಗೆಂದಿರು ಲಗ್ನವಾಗಿ ಬೇರೆ ಊರಿಗೆ ಹೋಗಿದ್ದರು. ಮಾಲಿ ಅಜ್ಜಿಯು ಇರಲಿಲ್ಲ. ಬೆಂಜಾಮಿನ ಮತ್ತು ಅವನ ತಾಯಿ ಇಬ್ಬರೇ ಹೊಲಗೆಲಸ ಮಾಡುತ್ತಿದ್ದರು.
ಹೊಲಗೆಲಸದಲ್ಲಿ ಅವನಿಗೆ ಎಳ್ಳಷ್ಟು ವಿಶ್ರಾಂತಿ ದೊರೆಯುತ್ತಿರಲಿಲ್ಲ. ಅಭ್ಯಸಿಸಲು ವೇಳೆ ದೊರೆಯುತ್ತಿರಲಿಲ್ಲ.
ಎಷ್ಟೋ ಸಲ ಆತನು ಇಡೀ ರಾತ್ರಿ ಗಣಿತದ ಮೇಲಿನ ಪುಸ್ತಕಗಳನ್ನು ಓದುತ್ತಿದ್ದನು. ಕೆಲ ರಾತ್ರಿ ಕೊಳಲು ಮತ್ತು ಪಿಟಿಲುಗಳನ್ನು ಬಾರಿಸುತ್ತಿದ್ದನು. ತಂದೆಯ ನೆನಪು ಬರುತ್ತಿತ್ತು.





ನೆರೆಹೊರೆಯಲ್ಲಿಯ ಒಕ್ಕಲಿಗರ ಜತೆ ಬೆಂಜಾಮಿನನು ಗೆಳೆತನ ಮಾಡತೊಡಗಿದನು. ಅವರಲ್ಲಿಯ ಸಾಕಷ್ಟು ಒಕ್ಕಲಿಗರಿಗೆ ಓದಲು, ಬರೆಯಲು ಬರುತ್ತಿರಲಿಲ್ಲ. ಅವರಿಗೆ ಲೆಕ್ಕ ಮಾಡಲು ಬರುತ್ತಿರಲಿಲ್ಲ. ತಾವು ಬೆಳೆಸಿದ ಹೊಗೆಸೊಪ್ಪಿನ ತೂಕ ಮಾಡಲು ಬರುತ್ತಿರಲಿಲ್ಲ. ಆ ಬೆಳೆಯ ಬೆಲೆಯನ್ನು ನಿರ್ಧರಿಸುವ ಬಗೆ ಗೊತ್ತಿರಲಿಲ್ಲ. ಇವುಗಳನ್ನೆಲ್ಲ ಬೆಂಜಾಮಿನನು ಅವರಿಗೆ ಕಲಿಸಿದನು. ಆತನು ಅವರ ಪತ್ರಗಳನ್ನು ಬರೆಯುವ ಕೆಲಸ ಮಾಡತೊಡಗಿದನು. ಈ ಒಕ್ಕಲಿಗರು ದಿನಾಲು ಊರಿನ ಮಾರುಕಟ್ಟೆಯ ಹತ್ತಿರ ಭೆಟ್ಟಿಯಾಗುತ್ತಿದ್ದರು. ವೃತ್ತಪತ್ರಗಳಲ್ಲಿಯ ಸುದ್ದಿಗಳ ಬಗ್ಗೆ ಚರ್ಚೆ ಮಾಡತೊಡಗಿದರು. ಒಕ್ಕಲುತನದ ಸಮಸ್ಯೆಗಳ ಬಗ್ಗೆ ಪ್ರಶ್ನೆ ಕೇಳತೊಡಗಿದರು. ಬೀಜಗಳನ್ನು ಯಾವಾಗ ನೆಡಬೇಕು, ಯಾವಾಗ ಬೆಳೆ ಕೊಯ್ಯಬೇಕು,ಹಿಮಮಳೆ ಯಾವಾಗ ಬರಬಹುದು ಮುಂತಾದ ಪ್ರಶ್ನೆಗಳಿಗೆ ಬೆಂಜಾಮಿನನು ತನ್ನ ಅನುಭವಗಳ ಮೇರೆಗೆ ಉತ್ತರಿಸುತ್ತಿದ್ದನು.





1775ರ ಕ್ರಾಂತಿ

ತಾಯಿಯ ಮರಣದನಂತರ ಬೆಂಜಾಮಿನನಿಗೆ ಎಲ್ಲ ಹೊಲಗೆಲಸಗಳನ್ನು ಒಬ್ಬನೆ ಮಾಡಬೇಕಾಯಿತು. ಅಭ್ಯಾಸಕ್ಕಾಗಿ ವೇಳೆ ದೊರೆಯುತ್ತಿರಲಿಲ್ಲ. ಮಾರುಕಟ್ಟೆಯ ಹತ್ತಿರ ಗೆಳೆಯರು ಬರುತ್ತಿದ್ದರಿಂದ ಅವನಿಗೆ ಅಷ್ಟೇ ಸಮಾಧಾನವಾಗುತ್ತಿತ್ತು.


ಆ ದಿನದ ಒಂದು ಮಹತ್ವದ ಸುದ್ದಿಯು ಅವರ ಗೆಳೆಯರ ಹರಟೆಯ ವಿಷಯವಾಯಿತು. ಮೇರಿಲ್ಯಾಂಡ ಇದು 13 ಬ್ರಿಟಿಶರ ವಸಾಹತಗಳಲ್ಲಿಯ ಒಂದು ವಸಾಹತವಾಗಿತ್ತು. ಆದರೆ ಬಹಳಷ್ಟು ಅಮೇರಿಕನರಿಗೆ ಈ ವಸಾಹತುಗಳಿಗೆ ಸ್ವಾತಂತ್ರ್ಯವಿರಬೇಕೆಂದು ಅನ್ನಿಸುತ್ತಿತ್ತು. ಈ ವಸಾಹತುಗಳ ಆಢಳಿತೆಯನ್ನು ತಾವೇ ಮಾಡಬೇಕೆಂಬ ಹಂಬಲವಿತ್ತು. ತಾವು ಕೊಟ್ಟ ತೆರಿಗೆಯನ್ನು ಬ್ರಿಟಿಶ ರಾಣಿಗೆ ಹೋಗಬಾರದು ಎಂದು ಅವರಿಗೆ ಅನ್ನಿಸುತ್ತಿತ್ತು.



ಏಪ್ರಿಲ ತಿಂಗಳಲ್ಲಿ ಬ್ರಿಟಿಶ ಸೈನಿಕರು ಮ್ಯಸಾಚ್ಯುಸೆಟದಲ್ಲಿಯ ಅಮೇರಿಕನ ನಾಗರಿಕರ ಮೇಲೆ ದಾಳಿ ಮಾಡಿದರು. ಅಲ್ಲಿಯ ನಾಗರಿಕರು ಕೂಡಲೇ ಒಂದು ಸ್ವತಂತ್ರವಾದ ಸೇನೆಪಡೆಯನ್ನು ಕೂಡಿಸಿದರು. ಅದರ ಮುಂದಾಳುತನವನ್ನು ಜಾರ್ಜ ವಾಶಿಂಗ್ಟನ ವಹಿಸಿದರು. ಎಷ್ಟೋ ಸೈನಿಕರು ಬೆಂಜಾಮಿನನ ಹೊಲದ ಬದಿಯ ದಾರಿಯ ಮೇಲೆ ಕಾವಲು ಇಡುತ್ತಿದ್ದರು. ಯುದ್ಧದ ಲಕ್ಷಣಗಳು ಕಾಣತೊಡಗಿದವು.



ಎಷ್ಟೋ ಚಿಕ್ಕ ಪುಟ್ಟ ಕಾಳಗಗಳ ನಂತರ ಈ ವಸಾಹತುಗಳಿಗೆ ಸ್ವಾತಂತ್ರ್ಯ ದೊರೆಯಿತು. ಕ್ರಾಂತಿಯುದ್ಧ ಯಶಸ್ವಿಯಾಯಿತು. ಹೊಸ ರಾಷ್ಟ್ರ ಉದಯವಾಯಿತು. ಜಾರ್ಜ ವಾಶಿಂಗ್ಟನ ಅಮೇರಿಕೆ ಸಂಯುಕ್ತ ಸಂಸ್ಥಾನದ ಮೊದಲನೇ ರಾಷ್ಟ್ರಾಧ್ಯಕ್ಷರಾದರು.






ಯುದ್ಧದ ದಿನಗಳಲ್ಲಿ ಬೆಂಜಾಮಿನ ಒಕ್ಕಲುತನ ಮತ್ತು ಅಭ್ಯಾಸ ಇವುಗಳ ಕಡೆಗೆ ಗಮನವಿಟ್ಟಿದ್ದನು. ಹೊಸ ಹೊಸ ವಿದ್ಯೆಗಳನ್ನು ಕಲಿಯಲು ಪ್ರಯತ್ನಿಸುತ್ತಿದ್ದನು. ಜಾರ್ಜ ಎಲಿಕಾಟ ಎಂಬ ಭೂಮಾಪನ ಮಾಡುವ ಆತನ ಗೆಳೆಯನಿಗಾಗಿ ಭೂಮಿಯ ಮಾಪನ ಮತ್ತು ರೇಖಾಟನೆಗಳನ್ನು ಮಾಡಿ ಕೊಡುತ್ತಿದ್ದನು. ಇದರಿಂದಾಗಿ ಅಲ್ಲಿಯ ದಾರಿಗಳನ್ನು ಕಟ್ಟಲು ಅನುಕೂಲವಾಯಿತು. ಸರ್ವೇಯರ ಗೆಳೆಯನಿಂದಾಗಿ ಭೂಮಾಪನದಲ್ಲಿಯ ಎಷ್ಟೋ ಹೊಸ ಸಂಗತಿಗಳನ್ನು ಆತನು ಕಲಿತನು. ಇಷ್ಟಾದರೂ ಇನ್ನು ಹೆಚ್ಚು ಕಲಿಯಬೇಕೆಂದು ಅವನ ಬಯಕೆ ಇತ್ತು.



ಜಾರ್ಜನು ಬೆಂಜಾಮಿನನಿಗೆ ಖಗೋಲಶಾಸ್ತ್ರದ ಪರಿಚಯ ಮಾಡಿಕೊಟ್ಟನು. ಸೂರ್ಯ, ಚಂದ್ರ, ಗ್ರಹ, ನಕ್ಷತ್ರ ಇವುಗಳ ವಿಜ್ಞಾನವೆಂದರೆ ಖಗೋಲಶಾಸ್ತ್ರ. ಜಾರ್ಜನ ಹತ್ತಿರ ಒಂದು ಟೆಲಿಸ್ಕೋಪ ಇತ್ತು.ಅದರಿಂದ ಆಕಾಶ ನಿರೀಕ್ಷಣೆ ಮಾಡುವಾಗ ಆತನು ಬಹಳ ಆಶ್ಚರ್ಯಚಕಿತನಾಗುತ್ತಿದ್ದನು.



ಹೆಚ್ಚು ಮಿನುಗುವ ಚುಕ್ಕೆಗಳು ದೂರವಿರುವ ಚುಕ್ಕೆಗಳಾಗಿರದೆ ಅವು ಗ್ರಹಗಳಿವೆ ಎಂಬುದು ಅವನಿಗೆ ಗೊತ್ತಾಯಿತು. ಜಾರ್ಜನ ಹತ್ತಿರವಿದ್ದ ಖಗೋಲಶಾಸ್ತ್ರದ ಮೇಲಿನ ಪುಸ್ತಕಗಳನ್ನು ಅವನು ಓದತೊಡಗಿದನು. ಅದರಲ್ಲಿಯ ವಿವರಗಳ ಮೇಲಿಂದ ಆತನಿಗೆ ಗ್ರಹಗಳ ಭ್ರಮಣಮಾರ್ಗದ ಬಗ್ಗೆ ತಿಳಿಯತೊಡಗಿತು. ಮುಂಬರುವ ದಿನಗಳ ಹವೆಗುಣ ಹೇಗಿದೆ ಎಂಬುದನ್ನು ಊಹಿಸಬಹುದು, ಎಂಬುದು ಆತನಿಗೆ ಗೊತ್ತಾಯಿತು. ಭೂಮಾಪನದ ಅಭ್ಯಾಸದಿಂದಾಗಿ ಅವನಿಗೆ ಸಾಕಷ್ಟು ವಿವರಗಳು ದೊರೆಯ ತೊಡಗಿದವು.



ಜಗತ್ತಿನಲ್ಲಿ ಕಲಿಯಲು ಸಾಕಷ್ಟು ವಿಷಯಗಳಿವೆ! ಎಷ್ಟೋ ಸಲ ಬೆಂಜಾಮಿನ ನಿದ್ದೆ ಮಾಡದೆ ಇಡೀ ರಾತ್ರಿ ಅಭ್ಯಾಸ ಮಾಡುತ್ತಿದ್ದನು. ಅವನು ಯಾವಾಗಲು ತನ್ನ ಕೃಷಿ ಮಾಡುವ ಗೆಳೆಯರ ವಿಚಾರ ಮಾಡುತ್ತಿದ್ದನು. ಅವರು ಕೇಳುತ್ತಿರುವ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವದು ಮತ್ತು ಹುಡುಕಿ ಅದರ ಬಗ್ಗೆ ಹೇಳುವದು ಅವನಿಗೆ ಸೇರುತ್ತಿತ್ತು. ಆದ್ದರಿಂದ ಒಕ್ಕಲಿಗರಿಗೆ ಉಪಯುಕ್ತವೆನಿಸುವ ಪಂಚಾಂಗವನ್ನು ಬರೆಯಬೇಕೆಂದು ಅವನು ವಿಚಾರ ಮಾಡತೊಡಗಿದನು. 1700ರ ಸುಮಾರಿಗೆ ಪಂಚಾಂಗವು ಒಂದು ಮಹತ್ತವದ ಪುಸ್ತಕವೆಂದು ತಿಳಿದಿದ್ದರು. ಪ್ರತಿ ವರುಷ ಹೊಸ ಹೊಸ ಪಂಚಾಂಗಗಳು ಮಾರಾಟಕ್ಕೆ ಬರುತ್ತಿದ್ದವು. ವರುಷದಲ್ಲಿಯ ಪ್ರತಿಯೊಂದು ದಿವಸದ ಮಾಹಿತಿ ಅದರಲ್ಲಿ ದೊರೆಯುತ್ತಿತ್ತು. ಪಂಚಾಂಗವು ದಿನದರ್ಶಿಕೆಯಂತೆ ಕೆಲಸ ಮಾಡುತ್ತಿತ್ತು. ಅದರಲ್ಲಿ ಬೀಜಗಳನ್ನು ಯಾವಾಗ ಬಿತ್ತಬೇಕು, ಬೆಳೆಗಳ ಬಗ್ಗೆ ಯಾವ ಎಚ್ಚರಿಕೆ ತೆಗೆದುಕೊಳ್ಳಬೇಕು, ಬೆಳೆಗಳನ್ನು ಯಾವಾಗ ಕೊಯ್ಯಬೇಕು ಮುಂತಾದವುಗಳ ವಿವರಗಳು ಅದರಲ್ಲಿ ಇರುತ್ತಿದ್ದವು. ವಾತಾವರಣದ ಪೂರ್ವಸೂಚನೆಗಳು ಕೂಡ ಅದರಲ್ಲಿ ಇರುತ್ತಿದ್ದವು. ಕೆಲವು ಪಂಚಾಂಗಗಳಲ್ಲಿ ಸುದ್ದಿ, ಲೇಖನ, ಕತೆ, ಪಾಕಕೃತಿ ಮುಂತಾದ ವಿವರಗಳು ಕೂಡ ಇರುತ್ತಿದ್ದವು.



ಬೆಂಜಾಮಿನ ಮಸಿಯ ಬಾಟಲಿಯಲ್ಲಿ ಕಲಮು ಎದ್ದುತ್ತ ಬರೆಯುತ್ತಲೇ ಇದ್ದನು. ಟೇಬಲ್ಲಿನ ತುಂಬ ಕಾಗದಗಳು ಹರಡಿದ್ದವು. ಕೆಲವು ಕಾಗದಗಳ ಮೇಲೆ ಗಣಿತಗಳನ್ನು ಬಿಡಿಸಿದ ವಿವರಗಳಿದ್ದವು. ಕೆಲವುಗಳ ಮೇಲೆ ಆಕಾಶದ ನಿರೀಕ್ಷಣೆಯ ವಿವರಗಳಿದ್ದವು. ಇನ್ನು ಕೆಲವುಗಳ ಮೇಲೆ ಹವಾಮಾನದ ಅಂದಾಜು ಮಾಡಲಾಗಿತ್ತು.

ಬೆಳಗಾದಾಗಲೇ ಆತನು ತನ್ನ ಕಲಮು ಕೆಳಗಿಟ್ಟನು. ಏಕೆಂದರೆ ಆಕಳ ಹಾಲನ್ನು ಹಿಂಡುವ ವೇಳೆಯಾಗಿತ್ತು.

1790ರಲ್ಲಿ ರಾಷ್ಟ್ರಾಧ್ಯಕ್ಷ ವಾಶಿಂಗ್ಟನನು ಅಮೇರಿಕೆ ಸಂಸ್ಥಾನಗಳಿಗಾಗಿ ಹೊಸ ರಾಜಧಾನಿ ಕಟ್ಟಲು ನಿರ್ಧರಿಸಿದನು. ಅದಕ್ಕಾಗಿ ಸ್ಥಳವನ್ನು ಶೋಧಿಸಲಾಯಿತು. ಅದು ಡಿಸ್ಟ್ರಿಕ್ಟ ಆಫ ಕೋಲಂಬಿಯಾ ಎಂದು ಗುರುತಿಸಲಾಯಿತು. ಈ ಜಾಗ ಬೆಂಜಾಮಿನನ ಹೊಲದ ಸಮೀಪದ ದಾರಿಯಲ್ಲಿತ್ತು. ರಾಷ್ಟ್ರಾಧ್ಯಕ್ಷನಿಗೆ ಈ ಭೂಮಿಯ ಭೂಮಾಪನ ಮಾಡಲು ಸರ್ವೇಯರಗಳು ಬೇಕಾಗಿದ್ದವು. ಸರ್ವೇಯರ್ಸಗಳ ಮುಖ್ಯಸ್ಥನೆಂದು ಜಾರ್ಜ ಎಲಿಕಾಟನ ತಮ್ಮನಾದ ಅಂಡ್ರ್ಯೂ ಎಲಿಕಾಟನನ್ನು ನೇಮಿಸಲಾಗಿತ್ತು. ಅಂಡ್ರ್ಯೂನಿಗೆ ಬೆಂಜಾಮಿನನ ಭೂಮಾಪನ ಕೆಲಸದ ಪರಿಚಯವಿತ್ತು. ಬೆಂಜಾಮಿನನಿಗೆ ಖಗೋಲಶಾಸ್ತ್ರ ಮತ್ತು ಭೂಮಾಪನದ ಜ್ಞಾನ ಇದ್ದದ್ದರಿಂದ ಅವನ ಸಹಾಯವನ್ನು ಕೇಳಿದನು.





ರಾಜಧಾನಿಯ ಕೆಲಸಕ್ಕಾಗಿ ಭೂಮಾಪನ ಮಾಡುವದು ಒಂದು ಅಮೋಘ ಸಂಧಿ. ಬೆಂಜಾಮಿನನಿಗೆ ಹೆಮ್ಮೆಯ ವಿಷಯ. 1790ರ ಸುಮಾರಿಗೆ ಕಪ್ಪು ವರ್ಣದ ಜನರಿಗೆ ಇಂತಹ ಮಹತ್ವದ ಕೆಲಸಗಳು ದೊರೆಯುವದು ಬಹು ದುರ್ಲಭ. ಇಂತಹ ಕೆಲಸ ಬೆಂಜಾಮಿನನಿಗೆ ದೊರೆಯಿತು. ಅವನಿಗೂ ಈ ಕೆಲಸ ಮಾಡುವದರಲ್ಲಿ ಬಹು ಉತ್ಸಾಹ. ಅಂಡ್ರ್ಯೂ ಎಲಿಕಾಟನ ಹತ್ತಿರವಿದ್ದ ಭೂಮಾಪನೆಯ ಅತ್ಯಾಧುನಿಕ ಉಪಕರಣಗಳನ್ನು ಉಪಯೋಗಿಸುವದು ಅವನಿಗೆ ಬಹಳ ಸೇರುತ್ತಿತ್ತು. ಎಷ್ಟೇ ಚಳಿ ಇದ್ದರೂ ಚಳಿಗಾಲದಲ್ಲಿ ಆತ ದಿನ-ರಾತ್ರಿ ಕೆಲಸ ಮಾಡುತ್ತಿದ್ದನು. ಎಷ್ಟೋ ಸಲ ಬಯಲಲ್ಲಿದ್ದ ಡೇರೆಯಲ್ಲಿ ಮಲಗುತ್ತಿದ್ದನು. ಮುಂದಿನ ಮೂರು ತಿಂಗಳು ಕೆಲಸದ ಒತ್ತಡದಿಂದಾಗಿ ಮತ್ತು ಹವಾಮಾನದಿಂದಾಗಿ ಆತನು ಬಹಳ ದಣಿದನು. ಅವನಿಗೂ ಈಗ ಅರುವತ್ತು ವರುಷ. ಕೆಲಸ ಎಷ್ಟೇ ಸೇರಿದರೂ ಅದನ್ನು ಬಿಟ್ಟು ಮನೆಗೆ ತಿರುಗೆ ಹೋಗುವದನ್ನು ಆತ ನಿರ್ಧರಿಸಿದನು. ಆತನಿಗೆ ಪಂಚಾಂಗದ ಕೆಲಸವನ್ನು ಮಾಡಬೇಕಾಗಿತ್ತು.



ಪಂಚಾಂಗದ ಲೇಖಕ
1791

ಬೆಂಜಾಮಿನ ಬರೆಯುತ್ತಲೇ ಇರುತ್ತಿದ್ದನು. ಕಲಮುಗಳನ್ನು ಚೂಪು ಮಾಡುವಷ್ಟೇ ಅವನಿಗೆ ವಿಶ್ರಾಂತಿ. ತಾನು ಬಿಡಿಸಿದ ಗಣಿತದ ಸಮಸ್ಯೆಗಳು ಸರಿ ಇವೆಯೋ ಇಲ್ಲವೋ ಎಂಬುದನ್ನು ಆತ ಪರಿಶೀಲಿಸುತ್ತಿದ್ದನು. ಎಷ್ಟೋ ಸಲ ಹೊಲಗೆಲಸವನ್ನು ಕೂಡ ಮರೆತು ಬಿಡುತ್ತಿದ್ದನು. ಪಂಚಾಂಗವನ್ನು ಪೂರ್ಣಗೊಳಿಸಲು ನಾಲ್ಕು ತಿಂಗಳಷ್ಟು ಸಮಯ ಬೇಕಾಯಿತು. 1792ರ ಪಂಚಾಂಗದಲ್ಲಿ ಆತನು ಸಾಕಷ್ಟು ಮಾಹಿತಿಯನ್ನು ಬರೆದಿಟ್ಟನು. ವಿಶೇಷವಾಗಿ ಒಕ್ಕಲುತನಕ್ಕೆ ಉಪಯೋಗವಾಗುವ ಮಾಹಿತಿ ಅದರಲ್ಲಿತ್ತು.



ಸ್ವಂತದ ಸುಂದರವಾದ ಹಸ್ತಾಕ್ಷರಗಳಲ್ಲಿ ಬರೆದ ಪಂಚಾಂಗದ ನಾಲ್ಕು ಪ್ರತಿಗಳನ್ನು ತಯಾರಿಸಿದನು. ಅದರಲ್ಲಿಯ ಒಂದು ಪ್ರತಿಯನ್ನು ಆತನು ಅಮೇರಿಕೆಯ ಉಚ್ಚ ಪದದಲ್ಲಿದ್ದ ಥಾಮಸ್ ಜೆಫರ್ಸನನಿಗೆ ಕಳುಹಿಸಿಕೊಟ್ಟನು. ಜೆಫರ್ಸನ ಕೂಡ ಬೆಂಜಾಮಿನನ ಹಾಗೆ ಒಕ್ಕಲುತನ ಮಾಡುತ್ತಿದ್ದನು. ಆದರೆ ಆತನು ಗೌರ ವರ್ಣದ ಒಕ್ಕಲಿಗ. ಇತರ ಗೌರ ವರ್ಣದ ಒಕ್ಕಲಿಗರಂತೆ ಅವನ ಹತ್ತಿರ ಕೂಡ ದುಡಿಯಲು ಕಪ್ಪು ವರ್ಣದ ಗುಲಾಮರಿದ್ದರು.

ಪಂಚಾಂಗದ ಪ್ರತಿಯ ಜತೆ ಕಳಿಸಿಕೊಡಲು ಒಂದು ದೀರ್ಘವಾದ ಪತ್ರವನ್ನು ಕೂಡ ಆತನು ಬರೆದಿದ್ದನು. ಪತ್ರದಲ್ಲಿ ಗುಲಾಮಗಿರಿ ಪದ್ಧತಿಯು ಎಷ್ಟು ಕ್ರೂರವಿದೆ ಎಂಬುದನ್ನು ಆತ ಬಣ್ಣಿಸಿದ್ದನು. ಕಪ್ಪು ವರ್ಣದ ಜನರ ಜತೆ ಗೌರ ವರ್ಣದವರ ಹಾಗೆ ವರ್ತಿಸಬೇಕು ಎಂದು ಅದರಲ್ಲಿ ಬರೆದಿದ್ದನು. ಯಾರಿಗೂ, ಅದರಲ್ಲಿಯೂ ಅಮೇರಿಕೆಯ ಮುಂದಾಳುಗಳಿಗೆ ಗುಲಾಮರ ಒಡೆಯನಾಗಿರುವದು ಸರಿಯಲ್ಲ, ಎಂದು ಬರೆದಿದ್ದನು. ಕೆಲ ವಾರಗಳಾದ ಮೇಲೆ ಜೆಫರ್ಸನನಿಂದ ಉತ್ತರ ಬಂದಿತು. ಪಂಚಾಂಗ ಕಳಿಸಿದ್ದರ ಬಗ್ಗೆ ಅವನು ಆಭಾರ ವ್ಯಕ್ತಪಡಿಸಿದ್ದನು. ಭವಿಷ್ಯದಲ್ಲಿ ಕಪ್ಪ ವರ್ಣದ ಜನರ ಬಗ್ಗೆ ಸುಧಾರಣೆ ಆಗಬಹುದು ಎಂದು ಕೋರಿದ್ದನು. ಜೆಫರ್ಸನನು ತನ್ನ ಗುಲಾಮರನ್ನು ಮುಕ್ತ ಮಾಡಿರಲಿಲ್ಲ.






ಓರ್ವ ಪುಸ್ತಕ ಪ್ರಕಾಶಕನು ಬೆಂಜಾಮಿನ ಬರೆದ ಪಂಚಾಂಗದ ಮುದ್ರಣ ಮಾಡಿ ಮಾರಾಟ ಮಾಡುವ ಆಶ್ವಾಸನೆ ಕೊಟ್ಟನು. ಮೊದಲನೆ ಸಲವೇ ಕಪ್ಪು ವರ್ಣದ ಲೇಖಕನ ಪುಸ್ತಕವು ಪ್ರಕಾಶಿತವಾಗುತ್ತಲಿತ್ತು. ಪುಸ್ತಕದ ಮುಖಪೃಷ್ಠದ ಮೇಲೆ ದಪ್ಪಕ್ಷರದಿಂದ “ಬೆಂಜಾಮಿನ ಬನ್ನೆಕರ ಇವರ ಪಂಚಾಂಗ” ಎಂದು ಮುದ್ರಿಸಲಾಗಿತ್ತು. ಪ್ರಕಾಶಕನು ಸಾವಿರಾರು ಪ್ರತಿಗಳ ಮಾರಾಟ ಮಾಡಿದನು. ಬೆಂಜಾಮಿನನಿಗೆ ಸಾಕಷ್ಟು ಪ್ರಸಿದ್ಧಿ ದೊರೆಯಿತು. ಓದುಗರಿಂದ ಪತ್ರಗಳು ಬರತೊಡಗಿದವು. ಅದರಲ್ಲಿ ಸಾಕಷ್ಟು ವಿವರಗಳಿವೆ ಎಂದು ಓದುಗರು ಹೊಗಳಿದರು. ಎಷ್ಟೋ ಜನರು ಅವನನ್ನು ಭೆಟ್ಟಿಯಾಗಲಿಕ್ಕೆ ಬಂದರು. ಕಟ್ಟಿಗೆಯ ಗಡಿಯಾರ ಮಾಡಿದಾಗ ಜನ ಭೆಟ್ಟಿಯಾದಂತೆ ಈಗಲೂ ಭೆಟ್ಟಿಯಾಗುತ್ತಿದ್ದರು. ಬೆಂಜಾಮಿನನಿಗೆ ಬಿಡುವು ಇರಲಿಲ್ಲ. 1793ರ ಪಂಚಾಂಗ ಬರೆಯಬೇಕಾಗಿತ್ತು. ಮರು ವರುಷ ಅದನ್ನು ಬರೆದು ಮುಗಿಸಿದನು. ಇದೇ ರೀತಿ ಮುಂದಿನ ಆರು ವರುಷಗಳ ಪಂಚಾಂಗ ಬರೆದು ಪ್ರಕಾಶಿಸಿದನು.



ವಯಸ್ಸಾದ್ದರಿಂದ ಹೊಲಗೆಲಸ ಮಾಡಲು ಶಕ್ಯವಾಗುತ್ತಿರಲಿಲ್ಲ. ಆದ್ದರಿಂದ ಹೊಲವನ್ನು ಮಾರಬೇಕಾಯಿತು. ದಿನದ ಸಾಕಷ್ಟು ವೇಳೆ ಆತ ಕ್ಯಾಬಿನ್ನಿನಲ್ಲಿ ಕಳೆಯತ್ತಿದ್ದನು. ಚಿಕ್ಕಂದಿನಿಂದಲು ಅಲ್ಲಿಯೇ ಇದ್ದದ್ದರಿಂದ ಕೋಣೆ ಬಿಟ್ಟು ಹೋಗಬೇಕೆಂದು ಅನ್ನಿಸುತ್ತಿರಲಿಲ್ಲ. ಸಂಜೆಯ ಸಮಯದಲ್ಲಿ ಪಿಟಿಲು ಮತ್ತು ಕೊಳಲು ಬಾರಿಸುತ್ತಿದ್ದನು. ಮೈಮೇಲೆ ಶಾಲನ್ನು ಹೊತ್ತಿಕೊಂಡು ರಾತ್ರಿಯ ವೇಳೆಯಲ್ಲಿ ಆಕಾಶ ನೀರಿಕ್ಷಣೆ ಮಾಡುತ್ತಿದ್ದನು. ಬೆಂಜಾಮಿನ ಬನ್ನೆಕರನಿಗೆ ಈಗಲೂ ಅಚ್ಚರಿಯಾಗುತ್ತಿತ್ತು.



ಹಿನ್ನುಡಿ

1806ರಲ್ಲಿ ತನ್ನ ವಯಸ್ಸಿನ 75ನೆ ವರುಷ ಆತನು ಮರಣ ಹೊಂದಿದನು. ಯಾವ ದಿವಸ ಅವನ ಅಂತಿಮ ಸಂಸ್ಕಾರ ಮಾಡಲಾಯಿತೋ ಅದೇ ದಿವಸ ಅವನ ಕ್ಯಾಬಿನ್ನಿಗೆ ಬೆಂಕಿ ಹತ್ತಿ ಅದು ಭಸ್ಮವಾಯಿತು. ಬೆಂಜಾಮಿನನ ಎಲ್ಲ ಸೊತ್ತುಗಳು, - ಕಟ್ಟಿಗೆಯ ಗಡಿಯಾರ, ಪುಸ್ತಕದ ಹಸ್ತಪ್ರತಿ, ಮುತಾದವುಗಳು – ಸುಟ್ಟು ಹೋದವು. ಹೇಗೋ ಆತನ ಅಜ್ಜಿಯ ಬಾಯಬಲ್ ಪ್ರತಿಯನ್ನು ಆತನ ತಂಗಿಯು ಉಳಿಸಿದಳು.

ಬೆಂಜಾಮಿನ ಮತ್ತು ಅವನ ಕುಟುಂಬ ಸ್ವತಂತ್ರವಾದ ಆಯುಷ್ಯವನ್ನು ಜೀವಿಸಿದ್ದರೂ ಇನ್ನುಳಿದ ಎಷ್ಟೋ ಕಪ್ಪು ವರ್ಣದ ಕುಟುಂಬಗಳು ಅಮೇರಿಕನ ವಸಾಹತಿನಲ್ಲಿ ಗುಲಾಮರೆಂದೇ ಆಯುಷ್ಯ ತೆಗೆಯುತ್ತಿದ್ದರು. ಗೌರ ವರ್ಣದ ಜನ ಕಪ್ಪು ವರ್ಣದ ಜನರನ್ನು ಮೂರ್ಖರೆಂದೇ ತಿಳಿಯುತ್ತಿದ್ದರು. ಮತ್ತು ಅವರು ಗುಲಾಮರಾಗಿ ಇರುವದೇ ಸರಿ ಎಂದು ತಿಳಿಯುತ್ತಿದ್ದರು. ಎಷ್ಟೋ ಗೌರ ವರ್ಣದವರು ಸ್ವತಂತ್ರವಾಗಿ ಇರುವ ಕಪ್ಪು ವರ್ಣದ ಜನರನ್ನು ಬಂಧಿಸಿ ಹಿಡಿದಿಟ್ಟು ಗುಲಾಮರಾಗಿ ಇರಲು ಒತ್ತಾಯ ಪಡಿಸುತ್ತಿದ್ದರು. ಬೆಂಜಾಮಿನ ಹತ್ತಿರ ಕೂಡ ಅವರು ಸ್ವತಂತ್ರ ಎಂದು ರುಜುವಾತು ಪಡಿಸುವ ಕಾಗದ ಪತ್ರಗಳು ಇಲ್ಲದ ಮೂಲಕ ಅವರ ಕುಟುಂಬ ಕೂಡ ಯಾರಾದರೂ ಬಂದು ಹಿಡಿದಿಡಬಹುದು ಎಂಬ ಅಂಜಿಕೆಯಲ್ಲಿಯೇ ಜೀವಿಸುತ್ತಿತ್ತು..

ಎಷ್ಟೋ ಕೃಷ್ಣವರ್ಣೀಯ ಜನರಿಗೆ ತಾವು ಕೂಡ ಗೌರವರ್ಣೀಯರಷ್ಟೇ ಕರ್ತೃತ್ವ ಉಳ್ಳವರು ಎಂದು ಸಿದ್ಧ ಪಡಿಸಲು ಸಂಧಿಯೇ ದೊರೆತಿರಲಿಲ್ಲ. ಆದರೆ ಬೆಂಜಾಮಿನನು ಮಾತ್ರ ತನ್ನ ಕರ್ತೃತ್ವಶಕ್ತಿಯನ್ನು ತೋರಿಸಿದನು. ಕಟ್ಟಿಗೆಯ ಗಡಿಯಾರ, ಪಂಚಾಂಗದ ಲೇಖನ ಮತ್ತು ಭೂಮಾಪನದ ಕೆಲಸಗಳಿಂದ ಆತನು ಗೌರವರ್ಣೀಯರಿಗಿಂತ ತಾನು ತುಸು ಕೂಡ ಕಡಿಮೆ ಇಲ್ಲ ಎಂಬುದನ್ನು ಸಿದ್ಧಪಡಿಸಿದನು. ತ್ವಚೆಯ ಬಣ್ಣ ಮತ್ತು ಕರ್ತೃತ್ವಶಕ್ತಿ ಇವು ಒಂದಕ್ಕೊಂದು ಅವಲಂಬಿಸಿಲ್ಲ ಎಂಬುದು ಇದರಿಂದ ಸಿದ್ಧವಾಯಿತು. ಬೆಂಜಾಮಿನ ಬನ್ನೆಕರ ಒಬ್ಬ ವೈಚಾರಿಕ ಬುದ್ಧಿವಂತ ಮತ್ತು ಮೊದಲನೆಯ ಕೃಷ್ಣ ವರ್ಣದ ವೈಜ್ಞಾನಿಕನಾಗಿದ್ದನು.

ಮಹತ್ವದ ವರುಷಗಳು

1731- ನೊವ್ವೆಂಬರ 9ರಂದು ಮೇರಿಲ್ಯಾಂಡದಲ್ಲಿ ಜನ್ಮ
1750 –ಪಾಕೀಟ ವಾಚನ್ನು ನೋಡಿ ಕಟ್ಟಿಗೆಯ ಗಡಿಯಾರದ ರಚನೆ
1759- ತಂದೆಯ ಮೃತ್ಯು
1775 – ತಾಯಿಯ ಮೃತ್ಯು (ಸರಿಯಾದ ತಾರೀಖು ಗೊತ್ತಿಲ್ಲ)
1783 – ಯುನಾಯಟೆಡ್ ಸ್ಟೇಟ್ಸದ ಕ್ರಾಂತಿ ಯುದ್ಧದಲ್ಲಿ ವಿಜಯ ಮತ್ತು ಸ್ವಾತಂತ್ರ್ಯ ಪ್ರಾಪ್ತಿ
1789- ಅಮೇರಿಕೆಯ ಪ್ರಥಮ ಅಧ್ಯಕ್ಷನೆಂದು ಜಾರ್ಜ ವಾಶಿಂಗ್ಟನ್ ಇವರ ಆಯ್ಕೆ
1791- ಅಮೇರಿಕೆಯ ರಾಜಧಾನಿ ಇರುವ ಡಿಸ್ಟ್ರಿಕ್ಟ ಆಫ ಕೋಲಂಬಿಯಾದ ಭೂಮಾಪನ ಮಾಡುವದರಲ್ಲಿ ಸಹಾಯ
1792- ಮೊದಲನೆ ಪಂಚಾಂಗದ ಪ್ರಕಾಶನೆ. ಥಾಮಸ್ ಜೆಫರ್ಸನನಿಗೆ ಪ್ರತಿಯ ಕಾಣಿಕೆ. ಗುಲಾಮಗಿರಿಯ ವಿರುದ್ಧದಲ್ಲಿ ಅವನಿಗೆ ಬರೆದ ಪತ್ರ
1797 – ಅವನು ಬರೆದ ಕೊನೆಯ ಪಂಚಾಂಗದ ಪ್ರಕಾಶನೆ
1806 – ಮೇರಿಲ್ಯಾಂಡ ಕ್ಯಾಬಿನ್ನಿನಲ್ಲಿ ಮೃತ್ಯು

